ಕೆ.ಎನ್. ಗಣೇಶಯ್ಯ


# ಆರ್ಯವೀರ್ಯ

## ಭಾಗ-2

ನಾನು ಮತ್ತೆ ಕೊಠಡಿಯ ಸುತ್ತ ಕಣ್ಣು ಹಾಯಿಸಿದಾಗ ಒಂದು ಮೂಲೆಯಲ್ಲಿ ಟೀವಿ ಕಂಡಿತು. ಅದನ್ನು ನೋಡಿ ಆಶ್ಚರ್ಯದಿಂದ ಕೇಳಿದೆ.

"ಇಲ್ಲಿಯೂ ಟೀವಿ ಬರುವುದೆ?" ಅವರು ಚಹ ಸುರಿಯುತ್ತಲೆ, ನಮ್ಮೆದುರಿಗಿದ್ದ ಕಿಟಕಿಯ ಮೂಲಕ, ಅಲ್ಲಿನ ಶಾಲೆಯ ಮೇಲಿನ ಟವರ್ ತೋರಿಸಿ ಹೇಳಿದರು.

"ಆ ಟವರ್ ನನಗೆ ಹೊರಗಿನ ಪ್ರಪಂಚಕ್ಕೆ, ನೀವೆಲ್ಲ ಬದುಕುವ ನಾಗರಿಕತೆಗೆ ಕಿಟಕಿ. ಅದರಿಂದ ಟೀವಿ ಮತ್ತು ಅಂತರ್ಜಾಲವೂ ಸಿಗುತ್ತೆ. ಈ ಇಡೀ ವಿಹಾರಕ್ಕೆ ಸೂರ್ಯಶಕ್ತಿಯಿಂದಲೇ ಪವರ್. ಎಲ್ಲ ದಲೈ ಲಾಮಾ ಅವರ ಕರುಣೆ, ಕೊಡುಗೆ" ಎಂದರು ಚಹ ಸುರಿದ ಕಪ್ಪುಗಳನ್ನು ನಮ್ಮತ್ತ ತಳ್ಳುತ್ತ.



ವೆಂಕಟ್ರಮಣ ಭಟ್